ಫಾರೆಸ್ಟ್ ಇಲಾಖಾ.

ತಾರೀಖು 8ನೇ ಏಪ್ರೆಲ್ 1889.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಇದರಕಡಿ ಕಂಡ ಫಾರೆಸ್ಟುಗಳಿಂದ ಆಯಾ ಡಿಪೋಗಳಿಗೆ 1890ನೇ ಇಸವಿ ಮಾರ್ಚ್ 31ನೇ ತಾರೀಖಿನ ವರಿಯಂತ ನಾಟಾ ವ ಬೊಂಬುಗಳನ್ನು ತಯಾರಿಯಿಂದ ಸಾಗಿಸುವ ಬಗ್ಯಾಗಿ ಅಥವಾ ಸಾಗಿಸುವದಕ್ಕೆ ಮಾತ್ರವಾಗಲಿ ಹೊಸ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ.

ತಾಲ್ಲೂಕು.	ಫಾರೆಸ್ಟು.	ಡಿಪೋ ಹೆಸರು.
ಗುಂಡ್ಲುಪೇಟೆ	ಭಂಡೀಪುರ	ಮೈಸೂರು ವುಡ್‌ಯಾರ್ಡ್ ಹಂಗಳ ಮತ್ತು ಗುಂಡ್ಲುಪೇಟೆ ಡಿಪೋಗಳು
ಡಿಟೋ	ಬೇರಂಬಾಡಿ	ಡಿಟೋ ಮದ್ದೂರು ಮತ್ತು ಗುಂಡ್ಲುಪೇಟೆ ಡಿಪೋ
ಹೆಗ್ಗಡದೇವನಕೋಟೆ	ಬೇಗೂರು	ಡಿಟೋ ಬೇಗೂರು ಡಿಪೋ
ಡಿಟೋ	ಐನೂರು ಮಾರೀಗುಡಿ	ಡಿಟೋ ಹುರ ಡಿಪೋ
ಡಿಟೋ	ಕಾಕನಕೋಟೆ	ಡಿಟೋ ಅಂತರಸಂತೆ ಡಿಪೋ
ಡಿಟೋ	ವೀಟಿಕುಪ್ಪೆ	ಡಿಟೋ ಡಿಟೋ
ಹುಣಸೂರು	ವೀರನಹೊಸಹಳ್ಳಿ ಆನೇಚೌಕೂರ ಕಲಹನಹಳ್ಳಿ ದೊಡ್ಡಹರವೆ ಮೂವಕಲ್ಲು	ಡಿಟೋ ಹುಣಸೂರು ಡಿಪೋ
ಚಾಮರಾಜನಗರ	ಚಾಮರಾಜನಗರದ ಫಾರೆಸ್ಟುಗಳು	ಡಿಟೋ ಚಾಮರಾಜನಗರದ ಡಿಪೋ

2. ತಮಾಂ ದರಖಾಸ್ತುಗಳೂ "ಮೈಸೂರು ಡಿಸ್ಟ್ರಿಕ್ಟಿನಲ್ಲಿ ನಾಟಾ ವ ಬೊಂಬು ಫಾರೆಸ್ಟುಗಳಿಂದ ಡಿಪೋಗಳಿಗೆ ತಯಾರಿಯಿಂದ ಸಾಗಿಸುವ ಬಗ್ಯೆ ಅಥವಾ ಸಾಗಿಸುವದಕ್ಕೆ ಮಾತ್ರ ದರಖಾಸ್ತು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

3. ದರಖಾಸ್ತುಗಳು ಮೈಸೂರು ಡಿಸ್ಟ್ರಿಕ್ಟಿನ ಫಾರೆಸ್ಟು ಆಫಿಸರವರಿಂದ 1889ನೇ ಇಸವಿ ಮೇ 13ನೇ ತಾರೀಖಿನ ವರಿಗೆ ತೆಗದುಕೊಳ್ಳಲ್ಪಡುವದು.

4. ದರಖಾಸ್ತುಮಾಡಲು ಇಚ್ಛೈವುಳ್ಳ ಕಂಟ್ರಾಕ್ಟುದಾರರು ಮೇಲ್ಕಂಡ ಫಾರೆಸ್ಟುಗಳ ಪೈಕಿ ಬಂದಕ್ಕಿಂತಲೂ ಜಾಸ್ತಿ ಫಾರೆಸ್ಟುಗಳಿಂದ ತಯಾರ್ಮಾಡಿ ಸಾಗಿಸುವ ಬಗ್ಯೆ ಅಥವಾ ಸಾಗಿಸುವದಕ್ಕೆ ಮಾತ್ರ ದರಖಾಸ್ತು ಮಾಡಿದ ಪಕ್ಷದಲ್ಲಿ ಅವರು ನಾಟಾ ಯಾ ಬೊಂಬುಗಳನ್ನು ಪ್ರತಿ ಬಂದು ಫಾರೆಸ್ಟಿನಿಂದಲೂ ಯಾ ಡಿಪೋಗಳಿಗೆ ತಯಾರಿಯಿಂದ ಸಾಗಿಸುವ ಬಗ್ಯೆ ಒಪ್ಪಿಕೊಳ್ಳುವ ಕಮ್ಮಿ ದರವನ್ನು ಬೇರಬೇರೆಯಾಗಿ ನಮೂದಿಸತಕ್ಕದ್ದು. ತಯಾರಿಯು ಡಿಸ್ಟ್ರಿಕ್ಟಿನಲ್ಲಿ ಮಾಮೂಲಾಗಿ ನಡಿಯುವ ರೀತಿ ಯಿಂದಾಗಲಕ್ಕದ್ದು ಕುರಿತಾಗಿ ಈ ಅಂಶವು ಚನ್ನಾಗಿ ತಿಳಿಯುವದು--ಕಡಿಯತಕ್ಕ ಮರಗಳು ಫಾರೆಸ್ಟು ಇಲಾಖೆಯವರಿಂದ ಗುರ್ತು ಮಾಡಲ್ಪಡುವದು.

5. ಭಾರೀ ನಾಟಾಗಳಿಗೆ ದರ ಅಡಿ 1ಕ್ಕೆ ಯಿಪ್ಪೈಂತಲೂ ಚಿಲ್ಲರೆ ಚೌಬೀನೆ ಮತ್ತು ಬೊಂಬುಗಳಿಗೆ ದರ ಗಾಡಿ ಜೋಜಾ ಬಂದಕ್ಕೆ ಯಿಪ್ಪೈಂದು ನಮೂದಿಸತಕ್ಕದ್ದು. ದರ ಗಾಡಿ ಜೋಜಾ 1ಕ್ಕೆ ಚಿಲ್ಲರೆ ಚೌಬಿನೆ 25 ಸಲೆ ಅಡಿ ಮೇರಿಗೂ ಬೊಂಬುಗಳು 25ರಂತೆಯೂ ಮೇದರ ಗಳು 150ರಂತೆಯೂ ಕಿರೀ ಬಿದರು 200ರಂತೆಯೂ ಚಾಮರಾಜನಗರದಲ್ಲಿ 300ರಂತೆಯೂ ತಯಾರಿಯಿಂದ ಹೇರತಕ್ಕದ್ದು.

6. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಮೈಸೂರು ವುಡ್‌ಯಾರ್ಡಿಗೆ ಜಂಗಲ್‌ನಿಂದ ಸಾಗಿಸಲು ಉದ್ದೇಶಿಸಲ್ಪಟ್ಟ ತಮಾಂ ಚದರ ನಾಟುಗಳನ್ನೂ ತಯಾರೀ ತಾರೀಖು ಲಾಗಾಯತು 40 ದಿವಸಗಳ ಒಳಗಾಗಿ ಮೈಸೂರು ವುಡ್‌ಯಾರ್ಡಿಗೆ ಭಂಡೀ ಮೂಲಕ ಸಾಗಿಸುವ ಬಗ್ಯೆ ಬದ್ಧನಾಗಿ ಯಿರತಕ್ಕದ್ದು. ಸದರೀ 40 ದಿವಸಗಳ ಪೈಕಾಗಿ ವುಡ್‌ಯಾರ್ಡಿಗೆ ತಲಪದೆ ಯಿದ್ದರೆ ಆತನು ಆ ಬಾಬತು ತೊಲೆಗಳ ತಯಾರೀ ಮತ್ತು ಗಾಡೀ ಕಿರಾಯದ ಹಕ್ಕನ್ನು ತಮಾಂ ಕಳದುಕೊಳ್ಳತಕ್ಕದ್ದು.

7. ಮೈಸೂರು ವುಡ್‌ಯಾರ್ಡಿಗೆ ಅಲ್ಲದೆ ಇತರ ಡಿಪೋಗಳಿಗೆ ರವಾನೆ ಬಗ್ಯೆ ತಯಾರ್ಮಾಡುವ ಚಿಲ್ಲರೆ ಚೌಬೀನೆ ಮತ್ತು ಗಳುಗಳು ಸಹ ತಯಾರೀ ತಾರೀಖು ಲಾಗಾಯತು 20 ದಿವಸಗಳ ಪೈಕಾಗಿ ಆಯಾ ಡಿಪೋಗಳಿಗೆ ರವಾನಿಸತಕ್ಕದ್ದು. ಹಾಗೆ ತಪ್ಪಿದಲ್ಲಿ ತಯಾರಿ ಮತ್ತು ಕಿರಾಯದ ಹಕ್ಕನ್ನು ಕಳದುಕೊಳ್ಳತಕ್ಕದ್ದು.

8. ಪ್ರತಿ ಒಬ್ಬ ದರಖಾಸ್ತುದಾರನೂ ಹೂಲಿ ಜಂಗಲಿಗಳಲ್ಲಿ ತಯಾರಾಗಿ ಮಜೂರಿ ಪಾವತೀಯಿಂದ ಬಿದ್ದುಯಿರುವ ಸಾಮಾನುಗಳನ್ನು ಮೈಸೂರು ವುಡ್‌ಯಾರ್ಡ್ ಬಗ್ಯೆ ಯಾವ ದರದಂತೆ ಒಪ್ಪಿಕೊಳ್ಳುತ್ತಾನೋ ಅದನ್ನು ಬೇರೆಯಾಗಿ ನಮೂದಿಸತಕ್ಕದ್ದು.

9. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ತನ್ನ ದರಖಾಸ್ತು ಮಂಜೂರಾದ ಬಗ್ಯೆ ತಾನು ಎರೆದುಕೊಡುವ ಕರಾರು ಬೇರೆ ಕ್ರಮವಾಗಿ ನಡೆದುಕೊಳ್ಳುವ ಬಗ್ಯೆ ಜಾಮೀನು ತರೀಕೆ ಫಾರೆಸ್ಟ 1ಕ್ಕೆ 200 ರೂಪಾಯಿ ಪ್ರಕಾರ ಡಿಪಾಜಿಟ್ ಕಟ್ಟತಕ್ಕದ್ದು.

10. ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಕಮ್ಮಿ ದರದ ಅಥವಾ ಮತ್ಯಾವ ದರಖಾಸ್ತುಗಳನ್ನಾಗಲಿ ಅಂಗೀಕರಿಸುವದಕ್ಕೆ ಬದ್ಧರಾಗಿ ಇರುವದಿಲ್ಲವು, ಮತ್ತು ಅಂಥಾ ಅಂಗೀಕಾರವು ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್ ಸಾಹೆಬರವರ ಸ್ಯಾಂಗ್ಷನ್‌ಗೆ ಮೊಳಪಟ್ಟಿರುತ್ತೆ.

11. ಉದ್ದೇಶಿಸುವ ಕಂಟ್ರಾಕ್ಟುದಾರರಿಗೆ ಆಪೇಕ್ಷಿತವಾದ ಯಿನ್ನೂ ಜಾಸ್ತೀ ಸಂಗತಿಗಳು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸಿನಲ್ಲಿ ವಿಚಾರಿಸಿ ಪಡಿಯಬಹುದು.

ಸಿ. ಇ. ಎಂ. ರೆನ್ಸಲ್, ಫಾರೆಸ್ಟ್ ಸೂಪರಿಂಟೆಂಡೆಂಟ್.